"ದೇವರು ಆ ಮೈಲಿಗೆಯ ರೂಪದಲ್ಲಿ ಅಲ್ಲದೆ ಮಡಿಯಾಗಿ ಬರಲಾಗುವುದಿಲ್ಲವೆ? ಮಡಿಯಾಗಿ ಕರೆಸಿರಿ," ಎಂದರು. ದಾಸರು "ಹಾಗೆಯೇ ಆಗಲಿ, ನಾಳೆ ದೇವರು ಮಡಿಯಾಗಿ ಬರುತ್ತಾನೆ" ಎಂದರು. ಮರುದಿನ ಪೂಜೆಯ ಸಮಯದಲ್ಲಿ ಒಂದು ದೊಡ್ಡ ಘಟಸರ್ಪ ಮಠಕ್ಕೆ ಬಂದಿತು. ಎಲ್ಲರೂ ಹಾವು ಹಾವು ಎಂದು ಕೂಗುತ್ತಾ ಓಡಿ ಹೋದರು. ಸರ್ಪ ವ್ಯಾಸರಾಯರ ಹತ್ತಿರ ಹೋಯಿತು. ಅವರು ಅದಕ್ಕೆ ಹಾಲು ನೈವೇದ್ಯ ಮಾಡಿದರು. ಸರ್ಪ ಹಿಂದಕ್ಕೆ ಹೋಯಿತು. ದಾಸರು ಆ ಭಕ್ತರಿಗೆ ಹೇಳಿದರು: "ದೇವರು ಯಾವಾಗಲೂ ಸೌಮ್ಯ ರೂಪದಲ್ಲಿರುವುದಿಲ್ಲ. ಎಲ್ಲ ಜೀವಿಗಳಲ್ಲಿಯೂ ಆತನೇ ಇರುತ್ತಾನೆ. ಅವನನ್ನು ನೋಡಲು ನಮ್ಮ ದೃಷ್ಟಿಗೆ ಶಕ್ತಿ ಬೇಕು, ಅಷ್ಟೆ."

ಉಪಸಂಹಾರ

ಹೀಗೆ ದೇವರನ್ನು ನೋಡಬೇಕಾದರೆ ಎಲ್ಲಿಗೋ ಹೋಗಿ ಅವನನ್ನು ಅರಸಬೇಕಾಗಿಲ್ಲ. ಅವನು ನಮ್ಮ ನಡುವೆಯೇ ಇದ್ದಾನೆ. ಅವನನ್ನು ಗುರುತಿಸಿ ಅವನ ಸೇವೆ ಮಾಡಬೇಕಾದದ್ದು ನಮ್ಮ ಕರ್ತವ್ಯ.

## ಪ್ರಹಸನ ಪ್ರಸಂಗ

ನಾವೊಂದು ಬಗೆದರೆ ದೈವವಿನ್ನೊಂದು ಬಗೆಯುತ್ತದೆ. ಜೀವನದಲ್ಲಿ ಏನೋ ಮಾಡಲು ಹೋಗಿ ಏನೋ ಆಗುವುದು ಅನೇಕರ ಅನುಭವ. ಆದ್ದರಿಂದ ನಾವು ಯಾವುದೇ ಪರಿಣಾಮಗಳಿಗೂ ಮಾನಸಿಕವಾಗಿ ಸಿದ್ಧರಾಗಿರಬೇಕು. ಇಲ್ಲದಿದ್ದರೆ ಕೊನೆಯಲ್ಲಿ ಪರಿತಪಿಸಬೇಕಾಗುತ್ತದೆ.

ಒಬ್ಬ ಧಡೂತಿಯ ಹುಡುಗನಿದ್ದ. ಅವನ ದೇಹ ಅತ್ಯಂತ ಸ್ಥೂಲ. ಶಾಲೆಯಲ್ಲಿ ಎಲ್ಲರೂ ಅವನನ್ನು ಹಾಸ್ಯಮಾಡುತ್ತಿದ್ದರು. ಅಡ್ಡಹೆಸರಿನಿಂದ ಕರೆಯುತ್ತಿದ್ದರು. ಅವನನ್ನು ಕೆಲವರು ನೂರು ಕೆ.ಜಿ. ಎಂದೇ ಕರೆಯುತ್ತಿದ್ದರು. ಇನ್ನು ಕೆಲವರು ಕುಂಬಳಕಾಯಿ ಎಂದು ಕರೆಯುತ್ತಿದ್ದರು. ಅವನಿಗೆ ಇದನ್ನೆಲ್ಲ ಕೇಳಿ ಕೇಳಿ ತುಂಬ ಬೇಸರವಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ.

ಒಂದು ಬಹುಮಹಡಿಯ ಕಟ್ಟಡದ ಹದಿಮೂರನೇ ಮಹಡಿಯಿಂದ ಕೆಳಗೆ ಧುಮುಕಿದ. ಧುಮುಕಿದ್ದಷ್ಟೇ ಅವನಿಗೆ ಗೊತ್ತು. ಮುಂದೊಂದೂ ಅವನಿಗೆ ತಿಳಿಯದು. ಅವನು ಕಣ್ಣು ತೆರೆದು ನೋಡಿದಾಗ ತಾನೊಂದು ಆಸ್ಪತ್ರೆಯಲ್ಲಿರುವುದು ಅವನಿಗೆ ತಿಳಿದು ಬಂತು. ಅವನಿಗೆ ಆಶ್ಚರ್ಯ! ಹೇಗೆ ಹೀಗಾಯಿತು? ದೂರದಲ್ಲಿ ನಿಂತಿದ್ದ ನರ್ಸನ್ನು ಕರೆದು ವಿಚಾರಿಸಿದ:

"ನಾನು ಆಸ್ಪತ್ರೆಗೆ ಹೇಗೆ ಬಂದೆ? ನಾನು ಸಾಯಲಿಲ್ಲವೆ?"

ನರ್ಸ್: "*ಇಲ್ಲ. ನೀನು ಬೀದಿಗೆ ಬೀಳುವಾಗ ಬೀದಿಯಲ್ಲಿ ಹೋಗುತ್ತಿದ್ದ ನಾಲ್ಕು ಜನರ ಮೇಲೆ ಬಿದ್ದು ಅವರು ಸತ್ತು ಹೋದರು. ನೀನು ಬದುಕಿ ಉಳಿದೆ*"

❀❀❀

ಅನೇಕ ಸಂದರ್ಭಗಳಲ್ಲಿ ಸ್ವಾಭಾವಿಕ ತಿಳಿವಳಿಕೆ ತಾಂತ್ರಿಕ ಜ್ಞಾನಕ್ಕಿಂತ ಮಿಗಿಲಾಗಿರುತ್ತದೆ. ನಾವು ತಾಂತ್ರಿಕತೆಗೆ ಅತಿಯಾಗಿ ಒತ್ತನ್ನು ಕೊಡುವುದರ ಮೂಲಕ ಸ್ವಾಭಾವಿಕ ತಿಳಿವಳಿಕೆಯನ್ನು ಕಳೆದುಕೊಳ್ಳುತ್ತೇವೆ.

ಒಂದು ಹೆದ್ದಾರಿ ಕಾಮಗಾರಿ ನಡೆಯುತ್ತಿತ್ತು. ಅನೇಕ ಬಗೆಯ ತಂತ್ರಜ್ಞರು ಅದರಲ್ಲಿ ತೊಡಗಿದ್ದರು. ಒಂದು ಹಳ್ಳಿಯಲ್ಲಿ ಕೆಲಸ ನಡೆಯುತ್ತಿರುವಾಗ ಕೆಲವರು ಹಳ್ಳಿಯವರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು.

ಮಾತಿನ ನಡುವೆ ಒಬ್ಬ ಇಂಜಿನೀಯರ್ ಹಳ್ಳಿಯವನನ್ನು ಕೇಳಿದ, "ನೀವು ರಸ್ತೆ ಮಾಡಬೇಕಾದರೆ ಏನು ಮಾಡುತ್ತೀರಿ?" ಎಂದು.

"ನಾವು ಒಂದು ಊರಿನಿಂದ ಇನ್ನೊಂದು ಊರಿಗೆ ರಸ್ತೆ ಮಾಡಬೇಕಾದರೆ ಒಂದು ಹೇಸರಗತ್ತೆಯನ್ನು ಆ ಊರಿಗೆ ಕಳಿಸುತ್ತೇವೆ. ಅದು ಯಾವ ಹಾದಿಯಲ್ಲಿ ಹೋಗುತ್ತದೋ ಅದೇ ಹಾದಿಯಲ್ಲಿಯೇ ರಸ್ತೆ ತಯಾರಿಸುತ್ತೇವೆ."

"ಹೇಸರಗತ್ತೆ ಸಿಗದೆ ಇದ್ದಾಗ ಏನು ಮಾಡುತ್ತೀರಿ?"—ಇಂಜಿನಿಯರ್ ಕೇಳಿದ.

ಹಳ್ಳಿಯವ ಹೇಳಿದ, "*ಒಬ್ಬ ಇಂಜಿನಿಯರ್‌ನನ್ನು ಕರೆಸುತ್ತೇವೆ*"

❀❀❀

ಅನೇಕವೇಳೆ ನಮ್ಮ ಜಾಣತನವೇ ನಮ್ಮನ್ನು ಪೆದ್ದರನ್ನಾಗಿಸುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ನಮ್ಮ ಜಾಣತನಕ್ಕೂ ಕಾಣ್ಕೆಗೂ ಬಹಳ ಅಂತರವಿರುತ್ತದೆ. ನಮ್ಮ ಜಾಣತನವನ್ನು ಕಡೆಗಣಿಸಿ ಕಾಣ್ಕೆಗೆ ಹೆಚ್ಚು ಒತ್ತನ್ನು ನೀಡಬೇಕಾಗುತ್ತದೆ.

ಒಂದು ಕಡೆ ಒಂದು ಅಪಘಾತ ಸಂಭವಿಸಿತು. ಊರಿನ ಜನ ಭಾರಿ ಪ್ರಮಾಣದಲ್ಲಿ ಸುತ್ತ ನೆರೆದರು. ಅಪಘಾತ ಸ್ಥಳಕ್ಕೆ ಹೋಗುವುದಕ್ಕೇ ದಾರಿ ಇರಲಿಲ್ಲ.

ಪತ್ರಕರ್ತನೊಬ್ಬನು ಅಲ್ಲಿಗೆ ಧಾವಿಸಿದನು. ಅಪಘಾತ ಸ್ಥಳಕ್ಕೆ ಹೋಗುವುದಕ್ಕೆ ಜನ ದಾರಿಯನ್ನೇ ಬಿಡಲಿಲ್ಲ. ಆ ಗುಂಪಿನಲ್ಲಿ ತೂರಿಕೊಂಡು ಹೋದರೆ ಇನ್ನೊಂದು ಅಪಘಾತವೇ ಸಂಭವಿಸಬಹುದೇನೊ ಅನ್ನುವಷ್ಟು ಜನನಿಬಿಡತೆ ಇತ್ತು ಮತ್ತು ಅಷ್ಟೇ ಗಲಭೆಯೂ ಇತ್ತು.

ಪತ್ರಕರ್ತನು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಜೋರಾಗಿ ಕೂಗಿದ: "ನೋಡಿ, ಅಪಘಾತದಲ್ಲಿ ಮಡಿದವನು ನನ್ನ ಮಗ. ದಯವಿಟ್ಟು ದಾರಿ ಬಿಡಿ." ಎಲ್ಲರೂ ಸದ್ದಿಲ್ಲದೆ ದಾರಿ ಮಾಡಿಕೊಟ್ಟರು. ಪತ್ರಕರ್ತನು ತನ್ನ ಜಾಣತನ ಕೆಲಸ ಮಾಡಿತಲ್ಲ ಎಂದು ಒಳಗೊಳಗೇ ಸಂತೋಷಿಸುತ್ತ ಮುನ್ನಡೆದ. ಆದರೆ ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ *ಸತ್ತು ಬಿದ್ದಿರುವುದು ಒಂದು ಕತ್ತೆ ಎಂದು ತಿಳಿದು ಬಂತು.*